ಓ ಎಸ ನಂಬರಃ 149/2021
ಪಿಡಬ್ಲೂ-1

ದಿಃ 25-09-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

**ಪಾಟೀ ಸವಾಲು ಶ್ರೀ ಎಂ ಬಿ ಆರ ವಕೀಲರಿಂದಃ**

ನಾನು ಬೆಡಕಿಹಾಳ ಗ್ರಾಮದಲ್ಲಿ 21 ವರ್ಷಗಳಿಂದ ವಾಸವಾಗಿದ್ದೇನೆ. ಅದಕ್ಕೂ ಮೊದಲು ಬೆಳಗಾವಿಯಲ್ಲಿ ಶಾಲೆ ಕಲಿಯಲು ಇದ್ದೇ. ನೇಜ ಗ್ರಾಮ ಮತ್ತು ಬೆಡಕಿಹಾಳ ಗ್ರಾಮದ ಮಧ್ಯೆ ಸುಮಾರು 5 ಕಿ.ಮೀ ಅಂತರ ಇದೆ. ನೇಜ ಗ್ರಾಮದಲ್ಲಿ ನನಗೆ ಸೇರಿದ ಬೇರೆ ಆಸ್ತಿ ಇಲ್ಲ. ದಾವಾ ಆಸ್ತಿ ಪ್ರತಿವಾದಿಯರಿಗೆ ಹೇಗೆ ಬಂತು ಎಂದು ಹೇಳಲು ಆಗುವುದಿಲ್ಲ. ದಾವಾ ಸರ್ವೆ ನಂಬರನಲ್ಲಿ ಮಾರುತಿ, ಬಾಬಣ್ಣ ಬಡಿಗೇರ ಮತ್ತು ದತ್ತಾ ಬಾಬಣ್ಣ ಬಡಿಗೇರ ರವರಿಗೆ ಪಾಲು ಇದೆ ಎಂದರೆ ಸರಿ. ನನ್ನ ಮತ್ತು ಪ್ರತಿವಾದಿ ನಡುವೆ ಮಾತುಕತೆ ಬೆಡಕಿಹಾಳನ ನಮ್ಮ ಮನೆಯಲ್ಲಿ ಆಗಿರುತ್ತದೆ. ಮಾತುಕತೆಯಲ್ಲಿ ಪ್ರತಿವಾದಿಗಳು ಹಾಜರು ಇದ್ದರು. ದಿನಾಂಕಃ 16/07/2014 ರಂದು ಕರಾರು ಬರೆಯುವಾಗ 3 ಲಕ್ಷ 50 ಸಾವಿರ ಹಣವನ್ನು ಪ್ರತಿವಾದಿಗಳಿಗೆ ನಗದು ರೂಪದಲ್ಲಿ ಕೊಟ್ಟಿರುತ್ತೇನೆ. ಪ್ರತಿವಾದಿಗಳು ಮನೆ ತೆಗೆದುಕೊಳ್ಳುತ್ತಿದ್ದರು ಆದ್ದರಿಂದ ಹಣದ ಅಡಚಣೆ ಇತ್ತು ಹಾಗೂ ಮಗನ ಶಾಲೆಯ ಖರ್ಚು ವೆಚ್ಚಗಳ ಸಹ ಇದ್ದವು ಎಂದು ಹೇಳುತ್ತಾರೆ. ಯಾವ ಮನೆ ಮತ್ತು ಯಾರಿಂದ ಕ್ರಯಕ್ಕೆ ಪಡೆಯುತ್ತಿದ್ದರು ಎಂದು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯ ಗಂಡ ಅಪ್ಪಣ್ಣಾ ಸದರಿ ಜಮೀನಿನಿಂದ ಬರುವ ಆದಾಯದಿಂದ 2 ನೇ ಎದರುದಾರನನ್ನು ಓದಿಸುತ್ತಿದ್ದ ಎಂದರೆ ಸಾಕ್ಷಿಯು ಅಪ್ಪಣ್ಣ ತೀರಿಕೊಂಡು ಬಹಳ ದಿವಸ ವಾಗಿತ್ತು ಎಂದು ಹೇಳುತ್ತಾರೆ. ಸದರಿ ಅಪ್ಪಣ್ಣ ಈ ಆಸ್ತಿಯ ಆಧಾಯದಿಂದ 2 ನೇ ಎದರುದಾರರನ್ನು ಓದಿಸುತ್ತಿದ್ದ ಎಂದರೆ ಗೊತ್ತಿಲ್ಲ. ಅಪ್ಪಣ್ಣ ತೀರಕೊಂಡ ನಂತರ 1 ನೇ ಎದುರುದಾರಳು ಸದರಿ ದಾವಾ ಆಸ್ತಿಯ ಆಧಾಯದಿಂದ ಕುಟುಂಬ ನಿರ್ವಹಣೆ ಮಾಡಿ 2 ನೇ ಎದುರುದಾರಳನ್ನು ಓದಿಸುತ್ತಿದ್ದಳು ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೇಳಿರುತ್ತಾರೆ ಮುಂದುವರೆದ ಪಾಟೀ ಸವಾಲು ಮುಂದೂಡಲಾಯಿತು**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ.ಹೇ. ಕೇ. ಸ. ಇದೆ.

ಪ್ರ.ಹಿ.ದಿ.ನ್ಯಾಯಾಧೀಶರು,ಚಿಕ್ಕೋಡಿ